(ಅ) ಯೋಜನಾ ಭತ್ಯ ಕೊಡಲಾಗುತ್ತಿದೆ. ವರ್ಷ ಒಂದಕ್ಕೆ ಸುಮಾರು ೧,೭೧,೮೩೬ ರೂ. ಗಳು ಖರ್ಚಾಗುತ್ತಿದೆ.

(ಇ) ಯೋಜನೆಗಳ ಅಂದಾಜುವೆಚ್ಚ ೧೦ ಲಕ್ಷ ರೂ. ಗಳಿಗೆ ಮೀರಿದ್ದಾಗ ಈ ಕೆಳಕಂಡ ಕಾರಣಗಳಿಗಾಗಿ ಯೋಜನಾ ಭತ್ಯವನ್ನು ಮಂಜೂರು ಮಾಡಲಾಗಿದೆ.

(೧) ಯೋಜನೆಯ ಕ್ಷೇತ್ರದಲ್ಲಿ ಜೀವನವೆಚ್ಚ ಹೆಚ್ಚಾಗಿರುತ್ತದೆ.

(೨) ಯೋಜನಾ ಪ್ರದೇಶಗಳು ನಗರ ಪ್ರದೇಶದಿಂದ ದೂರವಿದ್ದು ದೊರೆಯುವ ಸೌಲಭ್ಯಗಳು ಕಡಿಮೆ.

(ಈ) ಈ ಯೋಜನೆಯ ಕೆಲಸಗಳಿಗಾಗಿ ನೇಮಕವಾಗಿದ್ದು ಕೆಲಸಮಾಡುತ್ತಿರುವ ಎಲ್ಲರಿಗೂ (ದಿನಗೂಲಿಯವರನ್ನುಳಿದು) ಯೋಜನಾ ಭತ್ಯಗಳನ್ನು ಕೊಡಲಾಗುತ್ತಿದೆ.

(ಉ) ಸರ್ಕಾರದ ಆಜ್ಞೆಯ ಪ್ರಕಾರ ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಮರಾಮತ್ ಮತ್ತು ಇತರೆ ಇಲಾಖೆಯ ನೌಕರದಾರರಿಗೂ ೧–೧–೭೦ ರಿಂದ ಸಂಬಳದ ಶೇಕಡ ೨೦ ರಂತೆ ಒಂದು ನೂರು ರೂ. ಗೆ ಮೀರದಂತೆ ಯೋಜನೆ ಭತ್ಯ ಕೊಡಲಾಗುವುದು.

ಈ ಯೋಜನೆಗಳಿಗಾಗಿ ಪ್ರತ್ಯೇಕವಾಗಿ ಮಂಜೂರಾಗಿರುವ ಆಸ್ಪತ್ರೆ ಮತ್ತು ಪೋಲೀಸು ಠಾಣೆಯಂತೆ ಇತರೆ ಇಲಾಖೆಯ ಅಧಿಕಾರಿಗಳು ಯೋಜನೆಯ ಕೆಲಸಗಳಿಗಾಗಿಯೆ ನೇಮಕ ಗೊಂಡಿಲ್ಲ. ಆದ ಕಾರಣ ಈ ಅಧಿಕಾರಿಗಳನ್ನು ಯೋಜನಾ ಭತ್ಯದ ಸಲುವಾಗಿ ಈಗಿನ ಸರ್ಕಾರಿ ಆಜ್ಞೆಯ ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳೆಂದು ಪರಿಗಣಿಸಲಾಗಿಲ್ಲ.

SECONDARY HIGH SCHOOLS IN YELLUR, BELGAUM TALUK

Sri B. B. SAYANAK (Belgaum).—

7. (11) Will the Minister for Education be pleased to state :—

(*a*) The number and names of Secondary High Schools at Yellur in Belgaum Taluk in Belgaum District ;

(*b*) the number of Girls' High Schools and when they were started ;

(*c*) the strength of students in each of these Secondary High Schools ?

Sri A. R. BADARINARAYANA (Minister for Education).—

(*a*) Three High Schools. They are :—

1. Shri Shivaji Vidyalaya High School for Boys,
2. Modern Education Society Girls High School,
3. Viswabharath Seva Samiti Girls High School.

(*b*) Two Girls' High Schools. They are :—

1. Modern Education Society Girls High School,
2. Viswabharath Seva Samithi Girls High School,

These were started during 1972-73 :—

(*c*) —

	Strength	
	Boys	*Girls*
1. Shivaji Vidyalaya High School for Boys. ...	189	...
2. Modern Education Society Girls High School.		25
3. Viswabharath Seva Samithi Girls' High School.		40

ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಲೈಂಗಿಕ ಶಿಕ್ಷಣ

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್, (ಶಿರ್ಸಿ).—

೮. (೧೩).—ವಿದ್ಯಾಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ರಾಜ್ಯದ ಕಾಲೇಜುಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಲೈಂಗಿಕ ಶಿಕ್ಷಣ ಕೊಡಬೇಕೆಂಬ ಸಲಹೆ ಸರಕಾರದ ಪರಿಶೀಲನೆಯಲ್ಲಿದೆಯೇ ;

(ಆ) ಈ ಬಗ್ಗೆ ಸರ್ಕಾರ ಕೈಕೊಂಡ ತೀರ್ಮಾನಗಳೇನು ?

ಶ್ರೀ ಎ. ಆರ್. ಬದರಿನಾರಾಯಣ.—(ವಿದ್ಯಾ ಮಂತ್ರಿಗಳು)

ಉತ್ತರ.– (ಅ). ಇಲ್ಲ.

(ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಜಿ-ಮಹಾರಾಜರುಗಳ ಅರಮನೆಗಳು

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

೯. (೧೪).—ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) ಮೈಸೂರಿನ ಮಾಜಿ–ಮಹಾರಾಜರಿಗೆ ಸೇರಿದ ಮೈಸೂರು, ಬೆಂಗಳೂರು ಮತ್ತು ಉದಕಮಂಡಲದ ಮೂರು ಅರಮನೆಗಳನ್ನು ಮಾರಾಟಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆಯೇ ;

(ಆ) ಈ ಅರಮನೆಗಳು ರಾಜ್ಯ ಸರಕಾರದ ಸ್ವತ್ತು ಮತ್ತು ಅವು ರಾಜ್ಯ ಸರ್ಕಾರದ ಮೇಲುಸ್ತುವಾರಿಯಲ್ಲಿವೆ. ಅವರು ಅವುಗಳನ್ನು ಮಾರಾಟ ಮಾಡಲು ರಾಜ್ಯ ಸರಕಾರದ ಒಪ್ಪಿಗೆಯಿಲ್ಲದೆ ಅವಕಾಶವಿಲ್ಲವೆಂದು ರಾಜ್ಯ ಸರಕಾರಕ್ಕೆ ಮನವಿಗಳು ಬಂದಿವೆಯೇ ;